

# ಚೆಲುವಿನ ಗುಡ್ಡ ಗುಡ್ನಾಪುರ

ಪ್ರಾಕೃತಿಕ ಸೌಂದರ್ಯದ ಅನಾವರಣದ ಜೊತೆಗೆ ಇತಿಹಾಸದ ಸ್ವಾರಸ್ಯಕರ ಘಟನೆಗಳನ್ನು ಪಿಸುಗುಡುವ ವಿಶಿಷ್ಟ ಪ್ರದೇಶ 'ಗುಡ್ನಾಪುರ'. ಶಿರಸಿ ತಾಲ್ಲೂಕಿನ ಈ ಗ್ರಾಮ ಪ್ರಾಕೃತಿಕ ಚೆಲುವು ಹಾಗೂ ಐತಿಹಾಸಿಕ ಕಥನಗಳಿಂದ ಪ್ರವಾಸಿಗರನ್ನು ತನ್ನತ್ತ ಸೂಜಿಗಲ್ಲಿನಂತೆ ಸೆಳೆಯುತ್ತದೆ.

ಶಿರಸಿಯಿಂದ ಗುಡ್ನಾಪುರಕ್ಕೆ 20 ಕಿ.ಮೀ. ದೂರ. ಕದಂಬರ ರಾಜಧಾನಿಯಾಗಿರುವ ಬನವಾಸಿಗೆ ಇಲ್ಲಿಂದ ಕೇವಲ 2 ಕಿ.ಮೀ. ಅಂತರ. ಗುಡ್ನಾಪುರದಿಂದ ಬನವಾಸಿಗೂ ಪ್ರವಾಸಿಗರು ಭೇಟಿ ನೀಡಬಹುದು. ಬನವಾಸಿ ಕನ್ನಡಿಗರ ಸಾಂಸ್ಕೃತಿಕ ತಾಣಗಳಲ್ಲೊಂದು.

ಯಾವುದೇ ಕಿರಿಕಿರಿ ಇಲ್ಲದ ಪ್ರಶಾಂತ ವಾತಾವರಣ ಗುಡ್ನಾಪುರದಲ್ಲಿದೆ. ಈಗ ಬೇಸಿಗೆ ಕಾಲವಾದುದ್ದರಿಂದ ಗುಡ್ನಾಪುರದ ಪರಿಸರ ಸಹೃದಯರಿಗೆ ಮೈಮನಗಳಿಗೆ ತಂಪು ನೀಡಬಹುದು. ಗಿಡಮರಗಳಿಂದ ಆವೃತವಾದ ರುದ್ರರಮಣೀಯ ತಾಣ, ತಂಪಾದ ಗಾಳಿ ನೋಡುಗರನ್ನು ಥಟ್ಟನೆ ಗಮನಸೆಳೆಯುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಇಲ್ಲಿಯ ಸುಂದರ ವಾತಾವರಣ, ವಿಹರಿಸಲು ಯೋಗ್ಯವಾದ ಮನೋಹರ ಕೆರೆ, ಶಿವಾಲಯ, ಐತಿಹಾಸಿಕ ಪ್ರಸಿದ್ಧಿ ಪಡೆದಿರುವ ರಾಣಿನಿವಾಸ ಮತ್ತು ಅಲ್ಲಿನ ಸುಂದರ ಕಲಾಕೃತಿಗಳು ಇತಿಹಾಸದ ಪುಟಗಳನ್ನು ನೆನಪಿಸಿಕೊಳ್ಳಲು ಒತ್ತಾಯಿಸುತ್ತವೆ.

ಗುಡ್ನಾಪುರ ಸೂರ್ಯಾಸ್ತದ ಚೆಲುವು ಕಣ್ತುಂಬಿಕೊಳ್ಳಲೂ ಪ್ರಶಸ್ತವಾದ ಸ್ಥಳ. ಸಂಜೆಯ ಸಮಯದಲ್ಲಿ ಕೆರೆಯ ಏರಿಯ ಮೇಲೆ ನಿಂತು, ಸೂರ್ಯ ತನ್ನ ಪಥವನ್ನು ಬದಲಿಸುವುದು ನೋಡುವುದು ಕಣ್ಣಿಗೆ ಹಬ್ಬ. ಕೆರೆಯ ಹಿಂಭಾಗದಲ್ಲಿ ವೀರಭದ್ರ ಗುಡ್ಡ, ಭೀಮನ ಗುಡ್ಡ, ಷಣ್ಮುಖನ ಗುಡ್ಡ, ಮಂಕ್ರಿಗುಡ್ಡ ಇವೆಲ್ಲವೂ ಕೆರೆ ಎನ್ನುವ ಕನ್ನಡಿಯಲ್ಲಿ ಇಣುಕಲು ಹಂಬಲಿಸುವ ಕಲಾಕೃತಿಗಳಂತೆ ಕಾಣಿಸುತ್ತವೆ. ಅಂದಹಾಗೆ, ಗುಡ್ನಾಪುರದ ಕೆರೆ 180 ಎಕರೆ ಪ್ರದೇಶದಲ್ಲಿದೆ.

ಕೆರೆಯ ಅಂಚಿನಲ್ಲಿ ನಿಂತು ನಿತ್ಯ ಹರಿದ್ವರ್ಣ ಗುಡ್ಡಗಳನ್ನು ನೋಡುವುದು ಒಂದು ರಮ್ಯ ಅನುಭವ. ಕೆರೆಯ ನೀರಿನ ತನುವಿನಿಂದಾಗಿ ಈ ಗುಡ್ಡಗಳು ವರ್ಷದ ಎಲ್ಲ ಕಾಲಗಳಲ್ಲೂ ಹಚ್ಚಹಸುರಿನ ಚಾದರ ಹೊದ್ದಿರುತ್ತವೆ. ಸುತ್ತಮುತ್ತಲು ಕೃಷಿ ಜಮೀನುಗಳಿರುವುದರಿಂದ, ಹಸಿರಿನ ಸೌಂದರ್ಯ ಇಮ್ಮಡಿಸಿ ರಸಿಕರ ಕಂಗಳಿಗೆ ಹಬ್ಬವುಂಟಾಗುತ್ತದೆ.

ಐದನೇ ಶತಮಾನದಲ್ಲಿ ಕದಂಬರ ರಾಜ ರವಿವರ್ಮ ಪ್ರಜೆಗಳಿಗೆ ನೆರವಾಗಲೆಂದು ಕೆರೆಯ ನಿರ್ಮಾಣ ಮಾಡಿದ. ಕೆರೆಯ ಪೂರ್ವ ಭಾಗದಲ್ಲೇ ಶ್ರೀ ಬಂಗಾರೇಶ್ವರ ಲಿಂಗವೂ ಇದೆ. ದೇವರ ಸನ್ನಿಧಾನದಲ್ಲೇ ಗಣಪತಿ, ಮಹಿಷಮರ್ಧಿನಿ, ಉಪದೇವತೆ ಮೂರ್ತಿಗಳು ಆಸ್ತಿಕರನ್ನು ಸೆಳೆಯುತ್ತವೆ.

> ಶಿರಸಿಗೆ ಸಮೀಪದ ಗುಡ್ನಾಪುರದ್ದು ಇಬ್ಬಗೆಯ ಆಕರ್ಷಣೆ. ಒಂದು ಪ್ರಾಕೃತಿಕ ಸೌಂದರ್ಯ. ಮತ್ತೊಂದು ಚಾರಿತ್ರಿಕ ಆಕರ್ಷಣೆ. ಹಾಂ, ಎಲ್ಲ ಊರುಗಳಂತೆ ಇಲ್ಲಿಯೂ ಆಸ್ತಿಕರನ್ನು ಸೆಳೆಯುವ ಮಂದಿರಗಳಿವೆ. ಈ ಬೇಸಿಗೆಯ ಧಗೆಯನ್ನು ತಪ್ಪಿಸಿಕೊಳ್ಳಲು ಬಯಸುವವರು ಒಂದು ದಿನದ ಮಟ್ಟಿಗೆ ಗುಡ್ನಾಪುರಕ್ಕೆ ಹೋಗಿಬರಬಹುದು.

■ **ಸವಿನಾ ನಾಯ್ಕ**

ಚಿತ್ರ: ಪ್ರದೀಪ್ ಕುಮಾರ್ ಮಳಗಿ

ಕೆರೆಯ ಪಕ್ಕದಲ್ಲೇ ಇರುವ 'ರಾಣಿ ನಿವಾಸ'ವು ಗುಡ್ನಾಪುರದ ಪ್ರಮುಖ ಪ್ರವಾಸಿ ಆಕರ್ಷಣೆಯ ಸ್ಥಳ. ಗುಡ್ಡತಾಟಕ ಹೆಸರಿನಿಂದಲೂ ಇದು ಪ್ರಸಿದ್ಧಿಯಾಗಿದೆ. ಕದಂಬರ ಆಳ್ವಿಕೆಯ ಕಾಲದಲ್ಲಿ ರಾಣಿಯು ಈ ಸ್ಥಳಕ್ಕೆ ವಿಶ್ರಾಂತಿಗಾಗಿ ಬರುತ್ತಿದ್ದಳು ಎಂಬ ಮಾತಿದೆ. ರಾಣಿನಿವಾಸ ಪ್ರವಾಸಿಗರನ್ನು ಐತಿಹಾಸಿಕ ಕಥೆಗಳೊಂದಿಗೆ ಕುತುಹಲವನ್ನು ಕೆರಳಿಸುವುದರ ಜೊತೆಗೆ ತನ್ನ ಸೌಂದರ್ಯದಿಂದ ಗಮನಸೆಳೆಯುತ್ತದೆ.

ಪ್ರತಿವರ್ಷ ಶಿವರಾತ್ರಿಯಂದು ಇಲ್ಲಿ 9 ದಿನಗಳ ಕಾಲ ವಿಜೃಂಭಣೆಯ ಜಾತ್ರೆ ನಡೆಯುತ್ತದೆ. ಈ ಸಮಯದಲ್ಲಿ ಸುತ್ತಮುತ್ತಲ ಊರುಗಳಿಂದ ಭಕ್ತರು ಧಾವಿಸಿಬರುತ್ತಾರೆ. ಬೇಸಿಗೆಕಾಲ ಬಂತೆಂದರೆ ಮಂಗಳವಾರ, ಶುಕ್ರವಾರಗಳಲ್ಲಿ ಭಕ್ತರು ಹೆಚ್ಚು.

ಉತ್ತರ ಕನ್ನಡ ಜಿಲ್ಲೆಯ ಶಿರಸಿಯಿಂದ ಬಂಗಾರೇಶ್ವರ ದೇವಸ್ಥಾನಕ್ಕೆ ಸುಮಾರು 24 ಕಿ.ಮೀ ದೂರ. ಶಿರಸಿಯಿಂದ ಬನವಾಸಿಯ ಮಾರ್ಗವಾಗಿಯೂ ಗುಡ್ನಾಪುರಕ್ಕೆ ತೆರಳಬಹುದು. ಶಿರಸಿಯ ಮಾರ್ಗವಾಗಿ ತೆರಳುವವರಿಗೆ ಬಸ್ ವ್ಯವಸ್ಥೆಯೂ ಉತ್ತಮವಾಗಿದೆ.

ಗುಡ್ನಾಪುರದಲ್ಲಿ ಊಟದ ವ್ಯವಸ್ಥೆಯಿಲ್ಲ. ಹಾಗಾಗಿ ಅಲ್ಲಿಗೆ ಹೋಗುವವರು ತಮ್ಮೊಂದಿಗೆ ಬುತ್ತಿ ಒಯ್ಯುವುದು ಒಳ್ಳೆಯದು. ಇಲ್ಲವೇ, ಎಲ್ಲ ಸಾಮಗ್ರಿಗಳನ್ನು ಹೊಂದಿಸಿಕೊಂಡು ಬಂದು ಈ ಸುಂದರ ಪರಿಸರದಲ್ಲಿ ಅಡುಗೆ ಮಾಡಿಕೊಂಡು ಉಣ್ಣುವ ಸುಖವನ್ನೂ ಅನುಭವಿಸಬಹುದು. ■